

# ವಿಚಿತ್ರ ‘ಪೂ’ ಮ್ಯೂಸಿಯಂ





ಇದು ನಿಜವಾಗಿಯೂ ತಮಾಷೆ ವಿಷಯವಲ್ಲ. ಬ್ರಿಟನ್‌ನಲ್ಲಿರುವ ವಿಲಕ್ಷಣ ಮ್ಯೂಸಿಯಂ ಬಗ್ಗೆ ಕೇಳಿದರೆ ನೀವು ಥೂ... ಎಂದು ನೀವು ಮೂಗು ಮುರಿಯಬಹುದು!

ಹೌದು ಈ ದೇಶದ ಇಸ್ಲ್ ಆಫ್ ವಿಟ್ ಜೂ ಎಂಬಲ್ಲಿ ಪ್ರಾಣಿಗಳ ದೇಹದಿಂದ ಹೊರ ಬರುವ ಘನತ್ಯಾಜವನ್ನು ಸಂಗ್ರಹಿಸಿಡುವ ಮ್ಯೂಸಿಯಂ ಇದೆ. ನ್ಯಾಷನಲ್ ಪೂ ಮ್ಯೂಸಿಯಂ ಎಂದು ಕರೆಯುವ ಈ ಚಿಕ್ಕ ಮ್ಯೂಸಿಯಂನಲ್ಲಿ ಮನುಷ್ಯನೂ ಸೇರಿದಂತೆ ಬೆಕ್ಕು, ಗೂಬೆ, ಪಾರಿವಾಳ, ಹಸು, ಸಿಂಹ, ನರಿ ಮುಂತಾದ ಪ್ರಾಣಿಗಳ 18 ವಿವಿಧ ಘನತ್ಯಾಜಗಳ ಸಂಗ್ರಹಣೆಯ ಪ್ರದರ್ಶನವಿದೆ.

ಇಲ್ಲಿ 38 ದಶಲಕ್ಷ ವರ್ಷಗಳಷ್ಟು ಹಳೆಯದಾದ ಡೈನೊಸಾರ್ ಮಲದ ಪಳೆಯುಳಿಕೆ ಜೊತೆಗೆ ಕಂದು ಬಣ್ಣದಲ್ಲಿರುವ ಹಲ್ಲು ಹಾಗೂ ಎಲುಬುಗಳನ್ನೊಳಗೊಂಡಿರುವ ಗೂಬೆ ಹಿಕ್ಕೆಯ ಸಣ್ಣ ಉಂಡೆಗಳನ್ನೂ ನೋಡಬಹುದು. ಎಲ್ಲಾ ಮಾದರಿಗಳನ್ನು ಚೆನ್ನಾಗಿ ಒಣಗಿಸಿ, ಗುಂಡಿ ಅದುಮಿದರೆ ಬೆಳಕನ್ನು ಬೀರುವಂತಹ ಗಾಜಿನ ಗೋಳದಲ್ಲಿ ಕೋಶೀಕರಿಸಿ ಇಡಲಾಗಿದೆ.

ಮಲವಿಸರ್ಜನೆ ಕ್ರಿಯೆಯು ನಮ್ಮ ಆರೋಗ್ಯದ ಬಗ್ಗೆ ಯಾವ ರೀತಿ ತಿಳಿಸಿಕೊಡುತ್ತದೆ? ಒಳಚರಂಡಿ ವ್ಯವಸ್ಥೆ ಕೆಲಸ ಹೇಗೆ ಮಾಡುತ್ತದೆ? ವಿಜ್ಞಾನಿಗಳು ಸಂಶೋಧನೆ ಕೈಗೊಳ್ಳಲು ಕರುಳಿನ ಬ್ಯಾಕ್ಟೀರಿಯಾಗಳು ವೈದ್ಯಕೀಯ ಕ್ರಾಂತಿ (ಮೆಡಿಕಲ್ ರೆವಲ್ಯೂಷನ್)ಗೆ ಹೇಗೆ ಪ್ರಚೋದನೆ ನೀಡುತ್ತವೆ ಎಂಬೆಲ್ಲ ಮಾಹಿತಿಗಳನ್ನು ಇಲ್ಲಿ ನೋಡಬಹುದಾಗಿದೆ. ಇಲ್ಲಿಗೆ ಭೇಟಿ ನೀಡುವ ಸಂದರ್ಶಕರು, ಮಲ ವಿಸರ್ಜನೆಯ ಬಗ್ಗೆ ಅರಿತುಕೊಳ್ಳಲಿ ಎಂಬುದು ಈ ಮ್ಯೂಸಿಯಂನ ಮುಖ್ಯ ಉದ್ದೇಶ.

ಸಂಶೋಧಕ ಹಾಗೂ ವಾಣಿಜೋದ್ಯಮಿಯಾಗಿರುವ ಡೆನಿಯಲ್ ರಾಬರ್ಟ್ ನ ಕಲ್ಪನೆಯ ಕೂಸಾಗಿದ್ದ ಈ ಪೂ ಮ್ಯೂಸಿಯಂ ಅನ್ನು ರಚಿಸಿದ್ದು ಎಸ್ಸೆಲ್ಟನ್ ಜಾರ್ಜ್ ಎನ್ನುವ ಕಲಾವಿದರ ಸಮೂಹ. ಈ ತಂಡವು ಸಂಗ್ರಹಿಸಿದ ಪ್ರತಿಯೊಂದು ಮಲ ಮಾದರಿಯನ್ನು ಗಾಜಿನ ಗೋಳದಲ್ಲಿ ಅಡಕ ಮಾಡುವ ಮುನ್ನ, ಒಣಗಿಸುವ ಯಂತ್ರದ ಸಹಾಯದಿಂದ ಚೆನ್ನಾಗಿ ಒಣಗಿಸುತ್ತಾರಂತೆ!

ನಾವು ‘ಥೂ.. ಕಕ್ಕ...’ ಎಂದು ಅಸಹ್ಯಪಟ್ಟುಕೊಳ್ಳುವ ವಸ್ತುವಿನ ಬಗ್ಗೆಯೂ ಮ್ಯೂಸಿಯಂ ಇರುವುದು ಅಚ್ಚರಿಯ ಸಂಗತಿಯಲ್ಲವೇ?

■ ವಿದ್ಯಾ ವಿ. ಹಾಲಭಾವಿ